ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 501(505)
ಸದಸ್ಯರ ಹೆಸರು : ಡಾ.ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 21/02/2022.
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕೆ.ಜಿ.ಎಫ್.,ನಲ್ಲಿರುವ ಬಿ.ಜಿ.ಎಂ.ಎಲ್. ಶಾಲೆಯು ಪ್ರಾರಂಭಗೊಂಡಿರುವುದು ಯಾವಾಗ;	ಕೆ.ಜಿ.ಎಫ್‌ನಲ್ಲಿರುವ ಬಿ.ಜಿ.ಎಂ.ಎಲ್. ಶಾಲೆಯು 1889ರಲ್ಲಿ ಪ್ರಾರಂಭಗೊಂಡಿರುತ್ತದೆ.
ಆ)	ಈ ಶಾಲೆಯ ಆಡಳಿತ ಮಂಡಳಿ ಯಾವುದು;	ಬಿ.ಜಿ.ಎಂ.ಎಲ್ ಶಿಕ್ಷಣ ಸಮಿತಿ ಸ್ವರ್ಣ ಭವನ, ಉರಿಗಾಂ, ಕೆ.ಜಿ.ಎಫ್. ಕೋಲಾರ ಜಿಲ್ಲೆ.
ಇ)	ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು; ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಹಾಗೂ ಶಾಲೆಯ ವಿಸ್ತೀರ್ಣವೆಷ್ಟು;	(see table below) ಶಾಲೆಯ ವಿಸ್ತೀರ್ಣ-6.5 ಎಕರೆ
ಈ)	ಬಿ.ಜಿ.ಎಂ.ಎಲ್ ಶಾಲೆಯು ಸ್ಥಗಿತಗೊಂಡು ದಶಕಗಳೇ ಕಳೆದರೂ, ಈವರೆವಿಗೂ ಈ ಸಂಸ್ಥೆಯನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳದಿರಲು ಕಾರಣವೇನು? (ವಿವರ ನೀಡುವುದು)	ಬಿ.ಜಿ.ಎಂ.ಎಲ್ ಸಂಸ್ಥೆ, ಕೆ.ಜಿ.ಎಫ್, ಕೋಲಾರ ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಬಿ.ಜಿ.ಎಂ.ಎಲ್ ಶಾಲೆಯು ಸರ್ಕಾರದ ಸಹಾಯಾನುದಾನಕ್ಕೆ ಒಳಪಟ್ಟ ಖಾಸಗಿ ಶಾಲೆಯಾಗಿರುತ್ತದೆ. ಸರ್ಕಾರದ ಸಹಾಯಾನುದಾನಕ್ಕೆ ಒಳಪಟ್ಟ ಖಾಸಗಿ ಅನುದಾನಿತ ಶಾಲೆಗಳ ಆಡಳಿತ ಮಂಡಳಿಗಳು ವಿವಿಧ ಕಾರಣಗಳಿಂದ ಸರ್ಕಾರದ ವಶಕ್ಕೆ ಒಳಪಡಲು ಸ್ವಇಚ್ಛೆಯಿಂದ ಕೋರಿಕೆ ಸಲ್ಲಿಸುತ್ತಿದ್ದು, ಇಂತಹ ಶಾಲೆಗಳನ್ನು ಸರ್ಕಾರದ ವಶಕ್ಕೆ ಪಡೆಯುವ ಕುರಿತಂತೆ ಸಾಮಾನ್ಯ ನೀತಿಯೊಂದನ್ನು ರೂಪಿಸಲು (General Policy) ದಿನಾಂಕ: 14/01/2022ರಂದು ನಡೆದ ಸಭೆಯಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸೂಚಿಸಲಾಗಿತ್ತು. ದಿನಾಂಕ:13-02-2022ರಂದು ಖಾಸಗಿ ಅನುದಾನಿತ ಪ್ರೌಢಶಾಲೆಗಳನ್ನು ಸರ್ಕಾರದ ವಶಕ್ಕೆ ಪಡೆಯುವ ನಿಟ್ಟಿನಲ್ಲಿ ಸಾಧಕ ಬಾಧಕಗಳ ಕುರಿತಾದ ವರದಿ ಸ್ವೀಕೃತವಾಗಿದ್ದು, ಸದರಿ ವರದಿಯನ್ನು ಪರಿಶೀಲಿಸಲಾಗುತ್ತಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ	ಪ್ರೌಢ ಶಾಲಾ ಶಿಕ್ಷಕರು ಸಂಖ್ಯೆ	ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ	ಪ್ರೌಢ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ
01	06	147	197

ಸಂಖ್ಯೆ: ಇಪಿ 47 ಎಸ್‌ಇಎಸ್ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು